**SC.270/2019**
**PW-01**

## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **S.C. No.**:217/2029

**ಸಾಕ್ಷಿಯನ್ನು ದಿನಾಂಕ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ MS ವಕೀಲರಿಂದಃ**

ನನ್ನ ಮಗಳ ಮದುವೆಗೂ ಮುಂಚೆ ನಮಗೆ ಆರೋಪಿ ಸಂಬಂಧ ಇರಲಿಲ್ಲ ಎಂದರೆ ನಿಜ. ಮದುವೆಗೂ ಮುಂಚೆ ನನ್ನ ಮಗಳು ಮತ್ತು ಆರೋಪಿ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು ಎಂದರೆ ನಿಜ . ಅವರ ಪ್ರೀತಿ ಬಗ್ಗೆ ಗೊತ್ತಾಗಿ ಆರೋಪಿಯ ಮನೆಯವರು ವಿರೋಧಿಸಿದ್ದರು ಎಂದರೆ ಸರಿಯಲ್ಲ. ಮದುವೆಗೂ ಮುಂಚೆ ಆರೋಪಿ ತನ್ನ ತಂದೆ , ತಾಯಿ ಅಣ್ಣ ತಮ್ಮಂದಿರ ಜೊತೆ ಒಂದೇ ಮನೆಯಲ್ಲಿ ವಾಸವಿದ್ದ ಎಂದರೆ ಸರಿಯಲ್ಲ. ಆರೋಪಿತರ ಮನೆಯವರಿಗೆ ಆರೋಪಿಯು ನನ್ನ ಮಗಳನ್ನು ಮದುವೆಯಾಗುವುದು ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಗಳ ಪ್ರೀತಿ ಬಗ್ಗೆ ಗೊತ್ತಾದ ನಂತರ ನಾವು ಅವರ ಮದುವೆ ಮಾಡಿದೆವು ಎಂದರೆ ನಿಜ . ಮದುವೆಯ ಬಳಿಕ ಆರೋಪಿತನ ಮನೆಯವರು ಆರೋಪಿ ಮತ್ತು ನನ್ನ ಮಗಳನ್ನು ಮನೆಗೆ ಸೇರಿಸಿರಲಿಲ್ಲ ಎಂದರೆ ನಿಜ. ಆ ಕಾರಣಕ್ಕೆ ಅವರು ನನ್ನ ಮನೆಗೆ ಬಂದು ವಾಸವಿದ್ದರು ಎಂದರೆ ಅವರು ಮೊದಲಿಗೆ ಬೇರೆ ಮನೆಯಲ್ಲಿ ವಾಸ ಇದ್ದರು . ಮೂರು ದಿನಗಳ ಬಳಿಕ ಅವರನ್ನು ನಾನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೆ. ಮದುವೆಯಾದ ಮೂರು ದಿನಗಳವರೆಗೆ ಗೌಸಿಯಾ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಮ್ಮ ಮನೆಯ ಹಿಂಭಾಗದಲ್ಲಿರುವ ಇನ್ನೊಂದು

ಮನೆಯನ್ನು ನನ್ನ ಮಗಳು ಮತ್ತು ಆರೋಪಿಗೆ ವಾಸ ಮಾಡಲು ಕೊಟ್ಟಿದ್ದೆವು ಎಂದರೆ ನಿಜ . ಆ ಮನೆ ಕೊಟ್ಟಾಗ ನಾನು ಆರೋಪಿಯಿಂದ ಇಪ್ಪತ್ತೈದು ಸಾವಿರ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.

ಮದುವೆಗಿಂತ ಮುಂಚೆ ಆರೋಪಿ ರಾಜೀವ್ ನಗರ ಹಾರ್ಡ್ ವೇರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ನಿಜ, ಮದುವೆಯ ಬಳಿಕ ಸಹ ಅಲ್ಲೇ ಕೆಲಸ ಮಾಡುತ್ತಿದ್ದ ಎಂದರೆ ನಿಜ . ಆರೋಪಿ ಬೆಳಿಗ್ಗೆ 8.30 ರಿಂದ 9.00 ಕ್ಕೆ ಕೆಲಸಕ್ಕೆ ಹೋಗಿ ರಾತ್ರಿ 9.00 ಕ್ಕೆ ಕೆಲಸ ಮುಗಿಸಿಕೊಂಡು ವಾಪಸ್ಸು ಬರುತ್ತಿದ್ದ ಎಂದರೆ ಸಂಜೆ 7.00 ರಿಂದ 8.00 ಗಂಟೆಗೆ ಬರುತ್ತಿದ್ದ. ಆ ಮನೆಯಲ್ಲಿ ಆರೋಪಿ ಮತ್ತು ನನ್ನ ಮಗಳು ಇಬ್ಬರೇ ವಾಸವಿದ್ದರು. ಆರೋಪಿಯ ತಮ್ಮ ಮತ್ತು ತಂದೆ , ತಾಯಿಗಳು ಕಮಾನ್ ಗೇಟ್ ಬಳಿ ವಾಸವಿದ್ದರು. ಅವರು ನನ್ನ ಮನೆ ಅಥವಾ ನನ್ನ ಮಗಳ ಮನೆಗೆ ಬರುತ್ತಿರಲಿಲ್ಲ ಎಂದರೆ ನಿಜ . ಬಹಳಷ್ಟು ವರ್ಷಗಳವರೆಗೆ ಆರೋಪಿ ಮತ್ತು ಮಗಳು ಆ ಮನೆಯಲ್ಲಿ ವಾಸ ಇದ್ದರು ಎಂದರೆ ನಿಜ . ಹಂತ ಹಂತವಾಗಿ ನಾನು ಆರೋಪಿಯಿಂದ ಒಂದು ಲಕ್ಷ ಹಣವನ್ನು ಬೋಗ್ಯ ಎಂದು ಪಡೆದಿದ್ದೆ ಎಂದರೆ ಸರಿಯಲ್ಲ.

ಆರೋಪಿ ನನ್ನ ಮಗಳು ಮತ್ತು ಮೊಮ್ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದ ಎಂದರೆ ನಿಜ . ನಮ್ಮ ಮನೆ ಖಾಲಿ ಮಾಡುವ ಎರಡು ಮೂರು ತಿಂಗಳ ಹಿಂದಿನಿಂದ ನನ್ನ ಮಗಳು ಆರೋಪಿಗೆ ನಾವು ಬೇರೆ ಮನೆಗೆ ಹೋಗೋಣ ಎಂದು ಹೇಳುತ್ತಿದ್ದಳು ಎಂದರೆ ಸರಿಯಲ್ಲ. ಆಗ ಆರೋಪಿ ಈ ಮನೆ ಚೆನ್ನಾಗಿದೆ , ಇಲ್ಲೇ ಎಲ್ಲಾ ವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಿದ್ದ ಎಂದರೆ ನಿಜ . ಆ ಕಾಲಕ್ಕೆ ನನ್ನ ಮಗಳೇ ಬಲವಂತವಾಗಿ ಮನೆ ಖಾಲಿ ಮಾಡಿಕೊಂಡು ಗಾಯಿತ್ರಿಪುರಂ ಹೋಗಿದ್ದಳು ಎಂದರೆ ಸರಿಯಲ್ಲ. ಗಾಯಿತ್ರಿಪುರಂನ ಬಾಡಿಗೆ ಮನೆಯ ಅಗ್ರಿಮೆಂಟನ್ನು ನನ್ನ ಮಗಳ ಹೆಸರಿಗೆ

ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಗಾಯಿತ್ರಿಪುರಂನ ಮನೆ ಎಂ.ಸಿ.ಸಿ ಕಾಲೋನಿಯಲ್ಲಿತ್ತು ಎಂದರೆ ನಿಜ. ಆ ಕಾಲೋನಿಯಲ್ಲಿನ ಮನೆಗಳನ್ನು ಕಾರ್ಪೋರೇಷನ್ನಿನಲ್ಲಿ ಕೆಲಸ ಮಾಡುವವರಿಗೆ ಚಿಕ್ಕ ಚಿಕ್ಕದಾಗಿ ಕಟ್ಟಿಕೊಟ್ಟಿದ್ದರು ಎಂದರೆ ನಿಜ . ಆ ಮನೆಯ ಅಕ್ಕ ಪಕ್ಕದಲ್ಲಿ ಕಾಲೋನಿಯ ಮನೆಗಳು ಇವೆ ಎಂದರೆ ನಿಜ .

ನನ್ನ ಮಗಳು ಮರಣ ಹೊಂದಿದ ದಿನ ಮನೆಯ ಮಾಲೀಕರೇ ನನಗೆ ಫೋನ್ ಮಾಡಿ ತಿಳಿಸಿದರು . ದಿಃ 24.07.2019 ರಂದು ರಾತ್ರಿ 8.00 ಘಂಟೆಗೆ ಆರೋಪಿ ನಮ್ಮ ಮನೆಗೆ ಬಂದು ಊಟ ಮಾಡಿ ಹೋಗಿದ್ದ . ಆ ಕಾಲಕ್ಕೆ ಆರೋಪಿ ಅಂದಾಜು ಅರ್ಧ ಘಂಟೆ ನಮ್ಮ ಮನೆಯಲ್ಲಿ ಇದ್ದ. ನಮ್ಮ ಮನೆಯಲ್ಲಿ ನನ್ನ ಹೆಂಡತಿ ಊಟ ಕೊಡುತ್ತಿಲ್ಲ ಎಂದು ಹೇಳಿದ್ದರಿಂದ ನಾನೇ ಹೋಟೆಲಿನಿಂದ ಊಟ ತರಿಸಿ ಕೊಟ್ಟಿದ್ದೆ. ಆ ದಿನ ರಾತ್ರಿ ಆರೋಪಿ ನಮ್ಮ ಮನೆಯಲ್ಲಿ ಉಳಿದುಕೊಂಡಿರಲಿಲ್ಲ. ಆರೋಪಿ ಮತ್ತು ನನ್ನ ಮಗಳು ವಾಸವಿದ್ದ ಮನೆಗೆ ನೌಷದ್ ಬರುತ್ತಿರಲಿಲ್ಲ . ನನ್ನ ಮಗಳು ಮರಣ ಹೊಂದಿದ ಬಗ್ಗೆ ಗೊತ್ತಾಗಿ ನಾನು ಆ ಮನೆಯ ಬಳಿ ಹೋದಾಗ ಅಲ್ಲಿ ಬೇರೆ ಜನ ಸೇರಿದ್ದರು . ಆ ಕಾಲಕ್ಕೆ ನನ್ನ ಮೊಮ್ಮಕ್ಕಳು ಮಾನಸ ಶಾಲೆಗೆ ಹೋಗಿದ್ದರು . ಮಧಾಹ್ನ 2.00 ಘಂಟೆಗೆ ಮಕ್ಕಳನ್ನು ಮನೆಗೆ ಕರೆದುಕೊಂಡು ಬಂದಿದ್ದೆವು . ಮಕ್ಕಳನ್ನು ಮನೆಗೆ ಕರೆದುಕೊಂಡು ಬಂದಾಗಲೇ ಆರೋಪಿ ಅಂಗಡಿಯಿಂದ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ, ಸಾಕ್ಷಿಯು ಸ್ವತಃ ಹೇಳುತ್ತಾರೆ ಆರೋಪಿ ಎಂಟು ದಿನಗಳವರೆಗೆ ತಪ್ಪಿಸಿಕೊಂಡು ಹೋಗಿದ್ದ.

ನನ್ನ ಮಗಳು ರಕ್ತದ ಮಡುವಿನಲ್ಲಿ ಬಿದ್ದ ವಿಚಾರ ಗೊತ್ತಾಗಿ, ನಾನು ನನ್ನ ಮಕ್ಕಳು ಮತ್ತು ಸಂಬಂಧಿಕರನ್ನು ಅಲ್ಲಿಗೆ ಕರೆಸಿದ್ದೆ ಎಂದರೆ ನಿಜ . ಆ ಕಾಲಕ್ಕೆ ನಾವೆಲ್ಲಾ ಸೇರಿ ಆರೋಪಿಗೆ ಇವನೇ ಕೊಲೆ ಮಾಡಿದ್ದಾನೆ ಎಂದು ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾವೆಲ್ಲಾ ಹೊಡೆದಿದ್ದ ಕಾರಣಕ್ಕೆ ಹೆದರಿ ಅಲ್ಲಿಂದ ಹೊರಟು

ಹೋಗಿದ್ದ ಎಂದರೆ ಸರಿಯಲ್ಲ. ನಿಪಿ-1 ದೂರನ್ನು ತಾಲ್ಲೂಕು ಕಛೇರಿಯಲ್ಲಿ ಬರೆಸಿದ್ದೆ . ಆ ಕಾಲಕ್ಕೆ ಮಧ್ಯಾಹ್ನ 2.30 ಆಗಿತ್ತು. ದೂರನ್ನು ನನ್ನ ಮಗಳು ಮರಣ ಹೊಂದಿದ್ದ ಮನೆಯ ಬಳಿಯೇ ಕೊಟ್ಟಿದ್ದೆ. ಶಮ್ಮು ಆರೋಪಿತನ ತಮ್ಮ ಎಂದರೆ ನಿಜ . ದೂರಿನಲ್ಲಿ ಶಮ್ಮು ಹೊಡೆದಿದ್ದ ಬಗ್ಗೆ ಹೇಳಿದ್ದೆ ಎಂದರೆ ಮೂರು ಜನರ ಮೇಲೆ ದೂರು ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಆತನ ಸಹೋದರರು ಯಾರೂ ಸಹ ನನ್ನ ಮಗಳಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ .

ನನ್ನ ಮಗಳ ಮರಣದ ಬಳಿಕ ಅವರ ಎಲ್ಲಾ ಮೂರು ಜನ ಮಕ್ಕಳನ್ನು ನನ್ನ ಬಳಿ ಇಟ್ಟುಕೊಂಡಿದ್ದೇನೆ ಎಂದರೆ ನಿಜ . ಆರೋಪಿ ಜಾಮೀನಿನ ಮೇಲೆ ಬಂದ ಬಳಿಕ ಮಕ್ಕಳನ್ನು ಕಳುಹಿಸುವಂತೆ ಕೇಳಿದ್ದ ಎಂದರೆ ಸರಿಯಲ್ಲ, ಸಾಕ್ಷಿಯು ಸ್ವತಃ ಹೇಳುತ್ತಾರೆ, ಕೇಸು ವಾಪಸ್ಸು ತೆಗೆದುಕೊಳ್ಳಿ ಎಂದು ಬೇರೆಯವರ ಮೂಲಕ ಹೇಳಿಸಿದ್ದ ಎಂದು ಹೇಳುತ್ತಾರೆ . ಆರೋಪಿ ಹಲವಾರು ಬಾರಿ ಮಕ್ಕಳನ್ನು ನೋಡಲು ಬಂದಾಗ ನಾನು ಅವರನ್ನು ನೋಡಲು ಅವಕಾಶ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮಕ್ಕಳಿಗೆ ಆರೋಪಿಯ ಜೊತೆ ಮಾತನಾಡದಂತೆ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅವರಿಗೆ ನಾನು ಹೇಳಿಕೊಟ್ಟಂತೆ ಸಾಕ್ಷಿ ಹೇಳಬೇಕೆಂದು ಬೆದರಿಕೆ ಹಾಕಿದ್ದೆ ಎಂದರೆ ಸರಿಯಲ್ಲ . ಆರೋಪಿ ಯಾವತ್ತೂ ನನ್ನ ಮಗಳಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೆ ಆರೋಪಿ ಕಾರಣನಲ್ಲ ಎಂದರೆ ಸರಿಯಲ್ಲ.

ನನ್ನ ಮಗಳು ಮರಣ ಹೊಂದಿದಾಗ ಆರೋಪಿಯ ಮನೆಯಲ್ಲಿ ಸಾಕಷ್ಟು ಹಣ , ಚಿನ್ನ ಮತ್ತು ಸಾಕಷ್ಟು ಸಾಮಗ್ರಿಗಳು ಇದ್ದವು ಎಂದರೆ ಸರಿಯಲ್ಲ. ನಾನು ಅವೆಲ್ಲವುಗಳನ್ನು ತೆಗೆದುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. ಈಗ ಎಲ್ಲಾ ಸಾಮಾನುಗಳನ್ನು ವಾಪಸ್ಸು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಮ್ಮಕ್ಕಳು ಹಲ್ಲೆ ಮಾಡಿದ ಬಗ್ಗೆ

ಹೇಳಿದರು ಎಂದು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಕೊಲೆ ಮಾಡಿದ್ದಾನೆ ಎಂದು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು